ಅಸಲು ದಾವಾ ಸಂಖ್ಯೆ 195/2011

ಪಿ ಡಬ್ಲ್ಯೂಃ 1

**ದಿನಾಂಕ :** 01.04.2026 **ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – 1ನೇ ಪ್ರತಿವಾದಿ ಪರವಾಗಿ ಶ್ರೀ ಆರ್ ಜಿ ವಕೀಲರಿಂದಃ**

ನಿಪಿ–11 ಪಹಣಿ ಪತ್ರಿಕೆಯು ಈ ದಾವೆಯ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಆರ್ ಟಿ ಸಿ ಯಂತೆ ಶಂಕರ್ ರಾವ್ ರವರ ಹೆಸರಿಗೆ 30 ಸೆಂಟ್ ಜಮೀನು ಇರುತ್ತದೆ. ನಿಪಿ–11 ರಂತೆ ಶಂಕರ್ ರಾವ್ ರವರಿಗೆ 15 ಸೆಂಟ್ ಜಮೀನು ಇದೆ ಎಂದರೆ ಸರಿಯಲ್ಲ. ಶಂಕರ್ ರಾವ್ ರವರು ನಿಪಿ–11 ರಲ್ಲಿ ನಮೂದಾಗಿರುವ ಸ್ವತ್ತನ್ನು ಹೊರತು ಪಡಿಸಿ ಬೇರೆ ಯಾವುದೇ ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರಲಿಲ್ಲ.

ನಿಪಿ–13ಋಣಭಾರ ರಾಹಿತ್ಯ ಪ್ರಮಾಣಪತ್ರವು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ನಿಪಿ–13ರ ದಾಖಲಾತಿಯಂತೆ 2004 ರಿಂದ 2019 ರವರಗೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ನಡಾವಳಿಗಳು ನಡೆದಿಲ್ಲ ಎಂದರೆ ಸರಿ. ನಿಪಿ–14 ಮತ್ತು ನಿಪಿ–15 ದಾಖಲಾತಿಗಳು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿ ಎಂದರೆ ಸರಿ. ನಾನು ಸಲ್ಲಿಸಿರುವ ನಿಪಿ–15 ರಲ್ಲಿಯೂ ಸಹಾ ಶಂಕರ್ ರಾವ್ ರವರ ಹೆಸರಿನಲ್ಲಿ ಕೇವಲ 15 ಸೆಂಟ್ ಸ್ವತ್ತು ಇದೆ ಎಂದರೆ ಅದು ತಪ್ಪಾಗಿ ನಮೂದಾಗಿರಬಹುದು. ನಿಪಿ–15 ರಲ್ಲಿ ನಮೂದು ಸುಳ್ಳು ಎಂದರೆ ಸಾಕ್ಷಿಯು ಅದು ಅಳತೆ ಮಾಡಿಸದೇ ಇರುವ ಕಾರಣ ಹಾಗೇ ನಮೂದು ಇದೆ ಎಂದು ನುಡಿಯುತ್ತಾರೆ.

ನನ್ನ ಪತಿ ಶಂಕರ್ ರಾವ್ ರವರು ನನ್ನ ಭಾವ ಅರ್ಜುನ್ ರಾವ್ ರವರಿಂದ ದಾವಾ ಅನುಸೂಚಿತ ಸ್ವತ್ತನ್ನು ಕ್ರಯಕ್ಕೆಪಡೆದಿದ್ದರು. ನನಗೆ ಕ್ರಯದ ದಿನಾಂಕ ನೆನಪಿಲ್ಲ. ನಿಪಿ–16 ರಲ್ಲಿಯೂ ಸಹಾ ಶಂಕರ್ ರಾವ್ ರವರ ಹೆಸರಿನಲ್ಲಿ ಕೇವಲ 15 ಸೆಂಟ್ ಸ್ವತ್ತು ಇದೆ ಎಂದರೆ ಸರಿಯಲ್ಲ. ನಿಪಿ–17 ಯಾವುದೆಂದು ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು, ನನಗೆ ಕಣ್ಣು ಕಾರಣದ ಕಾರಣ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–17 ನನ್ನ ಪತಿ ಶಂಕರ್ ರಾವ್ ರವರು ಅರ್ಜುನ್ ರಾವ್ ರವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದ ನೋಂದಾಯಿತ ಕ್ರಯಪತ್ರ ಎಂದರೆ ಸರಿ. ಸದರಿ ಕ್ರಯಪತ್ರ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿ.

ನಿಪಿ–17 ದಿನಾಂಕಃ30.09.1976 ರ ಕ್ರಯಪತ್ರ ಹಾಗೂ ನಿಡಿ–1 ಭೋಗ್ಯಪತ್ರದಲ್ಲಿರುವ ರಲ್ಲಿರುವ ಚೆಕ್ಕುಬಂದಿಗಳು ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-18 ರಂತೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ 1986 ರಿಂದ 2001ರವರೆಗಿನ ಋಣಭಾರ ರಾಹಿತ್ಯ ಪ್ರಮಾಣಪತ್ರ ಸಲ್ಲಿಸಿದ್ದು, ಸದರಿ ದಾಖಲಾತಿಯಲ್ಲಿ ನನ್ನ ಪತಿ ದಿನಾಂಕಃ 21.01.1986 ರಂದು ಪ್ರತಿವಾದಿಗೆ ಮಾರಾಟ ಮಾಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿ.

ನಿಪಿ–17 ದಿನಾಂಕಃ30.09.1976 ರ ಕ್ರಯಪತ್ರ ಹಾಗೂ ನಿಪಿ–18 ದಿ ನಿಪಿ–18 ರಂತೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ 1986 ರಿಂದ 2001ರವರೆಗಿನ ಋಣಭಾರ ರಾಹಿತ್ಯ ಪ್ರಮಾಣಪತ್ರದಲ್ಲಿರುವ ಚೆಕ್ಕು ಬಂದಿಗಳು ಒಂದೇ ಎಂದರೆ ಸರಿ. ಸದರಿ ನಿಪಿ–18 ರಂತೆ ನನ್ನ ಪತಿ 1ನೇ ಪ್ರತಿವಾದಿಗೆ ಸ್ವತ್ತನ್ನು ಕ್ರಯಕ್ಕೆ ಕೊಟ್ಟ ನಂತರ ದಿನಾಂಕಃ 27.08.1986ರಂದು ಪು. ಚಂದ್ರೋಜೀರಾಜ್ ರವರಿಗೆ ದಾವಾ ಅನುಸೂಚಿತ ಸ್ವತ್ತನ್ನು ಭೋಗ್ಯ ಮಾಡಿದ್ದರು ಎಂದರೆ ಸಾಕ್ಷಿಯು, ಪಕ್ಕದ ಸ್ವತ್ತನ್ನು ಭೋಗ್ಯ ಮಾಡಿದ್ದರು ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ 195/2011

ಪಿ ಡಬ್ಲ್ಯೂ: 1

ನಿಪಿ–17 ದಿನಾಂಕಃ 30.09.1976ರಂದು ನನ್ನ ಪತಿ 1ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿದ ನಂತರವೂ ಭೋಗ್ಯ ಮಾಡಿದ ಬಗ್ಗೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿಪಿ–1 ಭೋಗ್ಯ ಪತ್ರ, ನಿಪಿ–2 ಮತ್ತು ನಿಪಿ–17 ಕ್ರಯಪತ್ರಗಳು ಹಾಗೂ ನಿಪಿ–18 ಋಣಭಾರ ರಾಹಿತ್ಯ ಪ್ರಮಾಣಪತ್ರದಲ್ಲಿರುವ ಸ್ವತ್ತುಗಳು ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ.

ನಿಡಿ–1 ಮತ್ತು ನಿಪಿ–18 ರಲ್ಲಿರುವ ಸ್ವತ್ತುಗಳು ಒಂದೇ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಎರಡೂ ಬೇರೆ ಬೇರೆ ಸ್ವತ್ತುಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನಿಡಿ–1 ಕ್ರಯಪತ್ರ ಹಾಗೂ ನಿಪಿ–18 ಋಣಭಾರರಾಹಿತ್ಯ ಪ್ರಮಾಣಪತ್ರದಲ್ಲಿನ ಚೆಕ್ಕು ಬಂದಿ ಒಂದೇ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತು ಹಾಗೂ ಕ್ರಯಕ್ಕೆ ಕೊಟ್ಟಿರುವ ಸ್ವತ್ತುಗಳು ಒಂದೇ ಆಗಿದ್ದು, ಪ್ರತಿವಾದಿಗಳಿಂದ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಕ್ಕು ಅಧಿಕಾರಿ ಇಲ್ಲದೇ ಇದ್ದರೂ ಸಹಾ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನನ್ನ ಮತ್ತು ನನ್ನ ಮಕ್ಕಳ ಸಹಿ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ಭೋಗ್ಯಪತ್ರವನ್ನು ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ